ನಾವು ಏರಿಸಿರತಕ್ಕಂಥ ಕಾರಣ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಅಲ್ಲಿ ಕುಳಿತಾಗ ಏನು ಮಾತನಾಡುತ್ತಿದ್ದೆನೋ, ಇಲ್ಲಿ ಕುಳಿತಾಗಲೂ ಕೂಡ ಅದನ್ನೇ ಮಾತನಾಡುತ್ತಿದ್ದೇನೆ. ಅಲ್ಲಿ ಕುಳಿತಾಗಲೂ ಕೂಡ ರೈತರಿಗೆ ಪುಕ್ಕಸಟ್ಟಿ ವಿದ್ಯುತ್ತನ್ನು ಕೊಡಿ ಎಂದು ನಾನು ಹೇಳಿಲ್ಲ. ಇವತ್ತೂ ಕೂಡ ನಾನು ಅದೇ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಕುಳಿತಾಗ ಬೇರೆ, ಇಲ್ಲಿ ಕುಳಿತಾಗ ಬೇರೆ ಮಾತನ್ನು ಆಡುವುದಕ್ಕೆ ನಾನು ತಯಾರಿಲ್ಲ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಈಗ ಪ್ರಕಾಶ್‌ರವರು. ಆಲೂಗಡ್ಡೆಯ ವಿಷಯ ಏನೋ ಹೇಳಬೇಕೆಂದು ಇದ್ದರಲ್ಲ ಅದನ್ನು ಹೇಳಿ.

(8) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ಈ) ಆಲೂಗೆಡ್ಡೆ ದರ ಬಹಳ ಇಳಿದಿರುವ ಬಗ್ಗೆ

+ ಶ್ರೀ ಹೆಚ್.ಎಸ್.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಹಾಸನ ಜಿಲ್ಲೆಯಲ್ಲಿ ಪ್ರಮುಖವಾದಂಥ ಬೆಳೆ ಆಲೂಗೆಡ್ಡೆ ಬೆಳೆ. 1995-96ನೇ ಸಾಲಿನಲ್ಲಿ ಸುಮಾರು 24 ಸಾವಿರ ಹೆಕ್ಟೇರ್‌ನಲ್ಲಿ ಆಲೂಗೆಡ್ಡೆಯನ್ನು ಬಿತ್ತನೆ ಮಾಡಲಾಗಿದೆ. ಆವತ್ತಿನ ಮಾರುಕಟ್ಟೆಯಲ್ಲಿ ಅದಕ್ಕೆ ಸುಮಾರು 200 ರಿಂದ 250 ರೂಪಾಯಿ ಬೆಲೆ ನಿಗದಿಯಾಗಿತ್ತು. ಆದಾದ ನಂತರ ಸರ್ಕಾರ ನೇರವಾಗಿ ರೈತರಿಂದ ಆಲೂಗೆಡ್ಡೆಯನ್ನು ಕೊಂಡಿದ್ದರಿಂದ 350ರಿಂದ 400 ರೂಪಾಯಿ ಬೆಂಬಲ ಬೆಲೆಯನ್ನು ಘೋಷಿಸಿ ಸರ್ಕಾರ ನೇರವಾಗಿ ರೈತರಿಂದ ಕೊಂಡಿದ್ದರಿಂದ ಸುಮಾರು 500 ರೂಪಾಯಿಗೆ ಮೇಲ್ಪಟ್ಟು ಒಂದು ಕ್ವಿಂಟಾಲಿಗೆ ಬೆಲೆ ನಿಗದಿಯಾಯಿತು ಕಳೆದ ವರ್ಷ. ಆದ್ದರಿಂದ ರೈತರ ಜೀವನ ಉತ್ತರವಾಗುವಂಥ, ಅವನಿಗೆ ಅನುಕೂಲವಾಗುವಂಥ ಪರಿಸ್ಥಿತಿ ಬಂತು. ಸರ್ಕಾರ ಮುಂದೆ ಬರದಿದ್ದರೆ ಅವರು ಬಹಳಷ್ಟು ಕಂಗಾಲಾಗುತ್ತಿದ್ದರು. ಅವತ್ತು ನಿರ್ಧಾರವನ್ನು ಕೈಗೊಳ್ಳುವಂಥ ಸಂದರ್ಭದಲ್ಲಿ ಅಂದಿನ ಪ್ರಧಾನ ಮಂತ್ರಿಗಳಾದಂಥ ಸನ್ಮಾನ್ಯ ದೇವೇಗೌಡರು, ಮುಖ್ಯ ಮಂತ್ರಿಯಾದ ಜೆ.ಹೆಚ್.ಪಟೇಲರು ಹಾಗೂ....

ಶ್ರೀ ಎಸ್.ಎಸ್.ಪಾಟೀಲ್: ಈ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆದುಬಿಡಿ ಸಾಕು.

ಶ್ರೀ ಹೆಚ್.ಎಸ್.ಪ್ರಕಾಶ್: ಸರ್ಕಾರದ ಗಮನ ಸೆಳೆಯಬೇಕು ಎನ್ನುವ ಭಾವನೆಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಆಲೂಗೆಡ್ಡೆಯ ಬಗ್ಗೆ ನಿಮ್ಮ ರೆಗ್ಯುಲರ್ ಗಮನ ಸೆಳೆಯುವ ಸೂಚನೆ ಇತ್ತಲ್ಲ. ಇದು ಅದಲ್ಲ. ಆ ಗಮನ ಸೆಳೆಯುವ ಸೂಚನೆಯನ್ನು ಕೈಬಿಟ್ಟಿದ್ದೇವೆ.

ಏಕೆಂದರೆ ಅದರ ಸೂಚಕರು, ಇವತ್ತು ತೊಂದರೆಯಿರುವ ಕಾರಣ ನಾವು ಹೋಗಬೇಕು ಎಂದು ಹೇಳಿದರು. ಅದನ್ನು ಸೋಮವಾರ ತೆಗೆದುಕೊಳ್ಳುತ್ತಿದ್ದೇವೆ. ಈಗ ಸಮಯ ಇತ್ತು ಎಂದು ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಹೇಳುತ್ತಿರತಕ್ಕಂಥಾದ್ದು ಏನೆಂದರೆ, ಹೇರಳವಾಗಿ ಬೆಳೆದಿರತಕ್ಕಂಥ ಆಲೂಗೆಡ್ಡೆ ಮಾರುಕಟ್ಟೆಗೆ ಬಂದಿದೆ. ಯಶವಂತಪುರದ ರೆಗ್ಯುಲೇಟೆಡ್ ಮಾರ್ಕೆಟ್ ಯಾರ್ಡ್‌ನಲ್ಲಿ 50 ಕೆ.ಜಿ. ಆಲೂಗೆಡ್ಡೆ ಇರತಕ್ಕಂಥ ಮೂಟೆಯನ್ನು 30 ರೂಪಾಯಿಗೆ ಮಾರುತ್ತಿದ್ದಾರೆ. ವರ್ತಕರೆಲ್ಲರೂ ಸೇರಿ ನಮ್ಮನ್ನು ಸುಲಿಗೆ ಮಾಡಲು ಹೊರಟಿದ್ದಾರೆ ಎಂದು ಹೇಳುತ್ತಿದ್ದಾರೆ. ಆ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಹೆಚ್.ಎಸ್.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಸುಮಾರು 11 ಗಂಟೆ ಸಮಯದಲ್ಲಿ ಬೆಂಗಳೂರಿನಲ್ಲಿ ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ 50 ಕೆ.ಜಿಯನ್ನು 30 ರೂಪಾಯಿಗೆ ರೈತರು ತಂದಂಥ ಬೆಳೆಯನ್ನು ಕೇಳಿದಾಗ, ರೈತರು ಆಕ್ರೋಶಕ್ಕೆದ್ದು ಮಾರುಕಟ್ಟೆಯಲ್ಲಿ ಬಹಳಷ್ಟು ಗಲಾಟೆಯಾಗಿದೆ. ಕಾರಣವೆಂದರೆ, ಕಳೆದ ಸಾರಿ ಸರ್ಕಾರ ಇದಕ್ಕೆ 350 ರಿಂದ 400 ರೂಪಾಯಿಗಳಿಗೆ ಬೆಲೆಯನ್ನು ಯಾವಾಗ ಏರಿಸಿತು, ಆಗ ಉತ್ತಮವಾದಂಥ ಬೆಲೆ ಬಂತು. ಆದ್ದರಿಂದ ಸರ್ಕಾರ ಈಗ ರೈತರು ಬೆಳೆದಂಥ ಎಲ್ಲ ಆಲೂಗೆಡ್ಡೆಯನ್ನು ಕೊಳ್ಳದಿದ್ದರೂ ಪರವಾಗಿಲ್ಲ, ಸರ್ಕಾರ ನೇರವಾಗಿ ಮುಂದೆ ಬಂದು ನಾವು ಆಲೂಗೆಡ್ಡೆಯನ್ನು ಕೊಳ್ಳುತ್ತೇನೆ ಎಂದು ಹೇಳಿದರೆ, ಮಾರುಕಟ್ಟೆಯಲ್ಲಿ ಉತ್ತಮವಾದ ಬೆಲೆ ಬರುವುದೇನೋ ಎನ್ನುವ ಉದ್ದೇಶದಿಂದ ಅಂದಿನ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ದೇವೇಗೌಡರು, ಮುಖ್ಯ ಮಂತ್ರಿಗಳಾದಂಥ ಜೆ.ಹೆಚ್.ಪಟೇಲರು, ಬೈರೇಗೌಡರು ಮತ್ತು ಡಿ.ಟಿ.ಜಯಕುಮಾರ್‌ರವರು ಬಹಳಷ್ಟು ಸಹಾಯ ಮಾಡಿ ಆಲೂಗೆಡ್ಡೆ ಬೆಳೆಗಾರರ ಸಹಾಯಕ್ಕೆ ಬಂದಿದ್ದರು. ಆದರೆ, ಈ ಸಾರಿ 1997-98ನೇ ಸಾಲಿನಲ್ಲಿ ಸುಮಾರು 25 ಸಾವಿರ ಹೆಕ್ಟೇರ್‌ನಲ್ಲಿ ಸುಮಾರು 4 ಲಕ್ಷ ಟನ್ ಆಲೂಗೆಡ್ಡೆ ಉತ್ಪಾದನೆಯಾಗಿದೆ. ಆದರೆ ಇವತ್ತಿನ ಬೆಲೆ ಒಂದು ಕ್ವಿಂಟಾಲ್‌ಗೆ 60 ರೂಪಾಯಿ, 50 ಕೆ.ಜಿ.ಗೆ 30 ರೂಪಾಯಿ ಯಿಂದ 35 ರೂಪಾಯಿಗೆ ನಿಂತಿದೆ.

ಅಧ್ಯಕ್ಷರು: ನಿಮ್ಮ ಸಮಸ್ಯೆ ಅರ್ಥವಾಯಿತು.

ಶ್ರೀ ಹೆಚ್.ಎಸ್.ಸುರೇಶ್: ಆದ್ದರಿಂದ, ನಾನು ದಯಮಾಡಿ ಕೇಳಿಕೊಳ್ಳುವುದೇನೆಂದರೆ, ಸರ್ಕಾರ ಈ ಕೂಡಲೇ ಆಲೂಗೆಡ್ಡೆಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು. ಮತ್ತು ನೇರವಾಗಿ ರೈತರಿಂದ ಆಲೂಗೆಡ್ಡೆಯನ್ನು ಕೊಳ್ಳುವಂಥ ಕ್ರಮವನ್ನು ಜರುಗಿಸಬೇಕು. ಅದನ್ನು ಹಾಪ್‌ಕಾಮ್ಸ್, ಆಗ್ರೋ ಮತ್ತು ಮಾರ್ಕೆಟಿಂಗ್ ಫೆಡರೇಷನ್ನಿನ ಮುಖಾಂತರ ನೇರವಾಗಿ ಸರ್ಕಾರ ಈ ಆಲೂಗೆಡ್ಡೆಯನ್ನು ಕೊಳ್ಳಲು ಮುಂದಾಗಬೇಕು. ಸರ್ಕಾರ ಹಣವನ್ನು ಕೂಡಲೇ ಬಿಡುಗಡೆ ಮಾಡಿ, ಆಲೂಗೆಡ್ಡೆಯನ್ನು ತಕ್ಷಣವೇ ಕೊಳ್ಳುವಂಥ ಒಂದು ಏರ್ಪಾಡನ್ನು ಮಾಡಿದರೆ ರೈತ

ಬದುಕುತ್ತಾನೆ. ರೈತನ ಮನೆಯಲ್ಲಿದ್ದಂಥ ಚಿನ್ನ ಒಂದೂ ಅವನ ಮನೆಯಲ್ಲಿ ಉಳಿದಿಲ್ಲ. ಆಲೂಗೆಡ್ಡೆಯ ಬೆಲೆ ಏನಾಗಿದೆ ಎಂದರೆ, ಬಿತ್ತನೆ ಮಾಡುವಾಗ ಕ್ವಿಂಟಾಲ್‌ಗೆ 1, 100 ರೂಪಾಯಿ; ಅವರು ಶ್ರಮವನ್ನು ಹಾಕಿ, ಗೊಬ್ಬರವನ್ನು ಹಾಕಿ ಬೆಳೆದಂಥ ಬೆಳೆಗೆ ಒಂದು ಕ್ವಿಂಟಾಲ್‌ಗೆ 60 ರೂಪಾಯಿ ಎಂದರೆ, ರೈತ ಅದನ್ನು ಇವತ್ತು ಏನು ಮಾರಿದ್ದಾನೆ, ಅವನು ನಿಜವಾಗಲೂ ನಾಳೆ ಹಬ್ಬ ಮಾಡಲು ಆಗುವುದಿಲ್ಲ. ಆದ್ದರಿಂದ ಸರ್ಕಾರ ದಯಮಾಡಿ ಇದಕ್ಕೆ ಬೆಂಬಲ ಬೆಲೆಯನ್ನು ಕೊಡಬೇಕು.

ಅಧ್ಯಕ್ಷರು: ಮಂತ್ರಿಗಳು ಏನು ಹೇಳುತ್ತಾರೆ ಎಂದು ಕೇಳೋಣ, ಸ್ವಲ್ಪ ಇರಿ.

ಶ್ರೀ ಹೆಚ್.ಎನ್.ನಂಜೇಗೌಡ: ಸನ್ಮಾನ್ಯ ಅಧ್ಯಕ್ಷರೇ, ಈಗ ಇದರ ಗಾಂಭೀರ್ಯತೆ ಎಷ್ಟಿದೆ, ಎಷ್ಟು ಕೆಟ್ಟ ಪರಿಸ್ಥಿತಿ ಇದೆ ಎಂದರೆ, ನಾವು ವಿಧಾನಸಭೆಯ ಮೊಗಸಾಲೆಯಲ್ಲಿ ನಾವು ಕೆಟ್ಟ ಕಾಫಿಯನ್ನು ಕುಡಿಯುತ್ತೇವಲ್ಲ, ಆ ಒಂದು ಕಾಫಿಯನ್ನು ಕುಡಿಯಬೇಕಾದರೆ ಈಗ 10 ಕೆ.ಜಿ. ಆಲೂಗೆಡ್ಡೆಯನ್ನು ಕೊಡಬೇಕು. ಬೈರೇಗೌಡರು ನೆನೆಸಿಕೊಳ್ಳಬೇಕು. 10 ಕೆ.ಜಿ. ಆಲೂಗೆಡ್ಡೆಗೆ 3 ರೂಪಾಯಿ. ಇದು ಇವತ್ತು ಇರುವ ಬೆಲೆ. ಇವತ್ತು ಒಂದು ಕೆ.ಜಿ. ಆಲೂಗೆಡ್ಡೆ 30 ಪೈಸೆಯಾಗಿದೆ. ಇವತ್ತು ಎ.ಪಿ.ಎಂ.ಸಿ.ಯಲ್ಲಿ ಗಲಾಟೆಯಾಗಿರುವುದೇ ಇದಕ್ಕೆ. ಅಲ್ಲವೇ ಪ್ರಕಾಶ್?

ಶ್ರೀ ಡಿ.ಟಿ.ಜಯಕುಮಾರ್: ಅಷ್ಟು ಕಡಿಮೆ ಬೆಲೆಗೆ ಮಾರಾಟವಾಗಿಲ್ಲ.

ಅಧ್ಯಕ್ಷರು: ತಾವು ಮಂತ್ರಿಗಳಿದ್ದೀರಿ. ತಮಗೆ ಆ ಮಾಹಿತಿಯನ್ನು ಯಾರು ಕೊಟ್ಟರು?

ಶ್ರೀ ಡಿ.ಟಿ.ಜಯಕುಮಾರ್: ಎ.ಪಿ.ಎಂ.ಸಿ.ಗೆ ಫೋನ್ ಮಾಡಿ ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು: ರೈತರು ಮಾರಾಟ ಮಾಡಲು ಆಗದೇ 50 ಕೆ.ಜಿ.ಆಲೂಗೆಡ್ಡೆಯನ್ನು 30 ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ.

ಶ್ರೀ ಡಿ.ಟಿ.ಜಯಕುಮಾರ್: ನಾನು ಫೋನ್ ಮಾಡಿ ತಿಳಿದುಕೊಂಡಂತೆ, ಇವತ್ತು ಮಧ್ಯಾಹ್ನ ಒಂದೂವರೆ ಗಂಟೆಯಲ್ಲಿ 50 ಕೆ.ಜಿಯ ಆಲೂಗೆಡ್ಡೆಯ ಬ್ಯಾಗ್ 120 ರೂಪಾಯಿಗಳಿಗೆ ಹೋಗಿದೆ. ಅವರು ಹೇಳುತ್ತಿರುವಂತೆ ಮಾರಾಟವಾಗಿರುವುದು ಕೆಳದರ್ಜೆಯದು ಮತ್ತು ಒಣಗಿಹೋಗಿರುವಂಥಾದ್ದು.

ಶ್ರೀ ಕೆ.ಶ್ರೀನಿವಾಸಗೌಡ: ಮಾರುಕಟ್ಟೆಯಲ್ಲಿ ವರ್ತಕರು 50 ಕೆ.ಜಿ.ಯನ್ನು 30 ರೂಪಾಯಿಗೆ ಕೇಳಿದರಂತೆ. ರೈತರಿಗೆ ಕೋಪ ಬಂದು, ವರ್ತಕರಿಗೆ ಹೊಡೆದು ಗಲಾಟೆಯಾಗಿದೆ. ಡಿ.ಸಿ.ಪಿಯವರೂ ಅಲ್ಲಿಗೆ ಹೋಗಿದ್ದರಂತೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕಾಗುತ್ತದೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್, ಮತ್ತು ಶ್ರೀ ಶ್ರೀನಿವಾಸಗೌಡರು ಇವತ್ತು ಯಶವಂತಪುರದ ಮಾರ್ಕೆಟ್‌ನಲ್ಲಿ ನಡೆದ ಘಟನೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಿವಾಗಲೂ ಏನು ನಡೆದಿದೆ ಮತ್ತು ಯಾವ ಬೆಲೆಗೆ ಮಾರಾಟವಾಗುತ್ತಿದೆ ಎನ್ನತಕ್ಕ ನಿಖರವಾದ ಮಾಹಿತಿ ಸರ್ಕಾರಕ್ಕೆ ಬಂದಿಲ್ಲ. ನಾವು ರೈತರನ್ನು ಕೈ ಬಿಡುವ ಪ್ರಶ್ನೆಯೇ ಇಲ್ಲ. ಹೋದ ಸಲ ಕೂಡ ಇಂತಹ ಸಂದರ್ಭದಲ್ಲಿ ನಾವು ರೈತರ ನೆರವಿಗೆ ಬಂದಿದ್ದೆವು. ಆ ರೀತಿಯ ಕಷ್ಟದ ಪರಿಸ್ಥಿತಿ ಇದ್ದರೆ, ಅವರು ಹೇಳಿದಹಾಗೆ, ಗುಣಮಟ್ಟದ 50 ಕೆ.ಜಿ.ಆಲೂಗೆಡ್ಡೆ 30 ರೂಪಾಯಿಗೆ ಮಾರಾಟವಾಗ ತಕ್ಕದ್ದು ನಿಜವಾಗಿದ್ದರೆ ಹೇಳಲಿ. ನನಗೇನೂ ಈ ಬೆಳೆ ಹೋಸದೇನೂ ಅಲ್ಲ. ಆಲೂಗೆಡ್ಡೆಯನ್ನು ಬೆಳೆಯಬೇಕಾದರೆ ಯಾವ ರೀತಿ ಬೆಳೆಯಬೇಕು, ಹೇಗೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಆಲೂಗೆಡ್ಡೆ 30 ರೂಪಾಯಿ ಮಾರಾಟವಾಗುತ್ತಿದ್ದರೆ, ಖಂಡಿತವಾಗಿಯೂ ಸಹ ಸರ್ಕಾರ ಅದರ ಕಡೆ ಗಮನಹರಿಸುತ್ತದೆ. ರೈತರನ್ನು ಯಾವುದೇ ಪರಿಸ್ಥಿತಿಯಲ್ಲಿಯೂ ಸಹ ಕೈ ಬಿಡತಕ್ಕ ಪ್ರಶ್ನೆಯೇ ಇಲ್ಲವೆನ್ನುವುದನ್ನು ನಾವು ಸ್ಪಷ್ಟಪಡಿಸುತ್ತೇವೆ. ಇವತ್ತು ನಡೆದಿರತಕ್ಕ ಘಟನೆಯ ಪೂರ್ತಿಯಾದ ಮಾಹಿತಿಯನ್ನು ನಾವು ತರಿಸುತ್ತೇವೆ. ನಾಳೆ ಹಬ್ಬವಿರುವುದರಿಂದ, ಮಾರ್ಕೆಟ್ ತೆರೆದಿರುತ್ತದೆಯೊ, ಇಲ್ಲವೋ ಗೊತ್ತಿಲ್ಲ. ಸಾಧ್ಯವಾದರೆ ನಾನೇ ಮಾರ್ಕೆಟ್‌ಗೆ ಹೋಗಿ ಮಾರ್ಕೆಟ್‌ನಲ್ಲಿ ಏನು ಬೆಲೆ ಇದೆ ಎನ್ನತಕ್ಕದ್ದನ್ನು ಪರಿಶೀಲನೆ ಮಾಡುತ್ತೇನೆ. ರೈತರನ್ನು ಕೈ ಬಿಡುವ ಪ್ರಶ್ನೆ ಇಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಈ ವರ್ಷ ನಮ್ಮ ಬಜೆಟ್‌ನಲ್ಲಿ ನಾವೀಗಾಗಲೇ ಮುಂಜಾಗ್ರತೆಯನ್ನು ತೆಗೆದುಕೊಂಡಿದ್ದೇವೆ. ಸುಮಾರು 2 ಕೋಟಿ ರೂಪಾಯಿಗಳಷ್ಟು ಹಣವನ್ನು ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಂ ಏನಿದೆ ಅದಕ್ಕಾಗಿ ನಾವು ಬಜೆಟ್‌ನಲ್ಲಿ ಕೂಡ ಹಣವನ್ನಿಟ್ಟಿದ್ದೇವೆ. ಹೊಸದಾಗಿ ಈ ರಾಜ್ಯದಲ್ಲಿ ಬಜೆಟ್‌ನಲ್ಲಿ ಏನಾದರೂ ಕೂಡ, ರೈತರ ಪರವಾಗಿ 2 ಕೋಟಿ ರೂಪಾಯಿಗಳಷ್ಟು ಭಾರೀ ಹಣವನ್ನಿಟ್ಟಿದ್ದೇವೆ, ರೈತರ ತಲೆ ಮೇಲೆ ಕಿರೀಟವನ್ನಿಟ್ಟಿದ್ದೇವೆ ಎನ್ನತಕ್ಕ ಭಾವನೆಯಲ್ಲಿಲ್ಲ. ಆದರೆ, ನಮ್ಮ ಆಲೋಚನೆ ಆ ದಿಕ್ಕಿನಲ್ಲಿದೆ, ಆ ಪ್ರಯತ್ನದಲ್ಲಿ ನಾವಿದ್ದೇವೆಂದು ಹೇಳಲು ಈ ಸಂದರ್ಭದಲ್ಲಿ ಇಚ್ಛಿಪಡುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಸರ್ಕಾರದಿಂದ ಬೆಂಬಲ ಬೆಲೆಯನ್ನು ಡಿಕ್ಲೇರ್ ಮಾಡಿ.

ಅಧ್ಯಕ್ಷರು: ಮಾನ್ಯ ನಂಜೇಗಡೌರೆ, ಅವರು ಬಹಳ ಸ್ಪಷ್ಟವಾಗಿ, ಈಗಲೇ ಮಾಹಿತಿಯನ್ನು ತರಿಸಿಕೊಳ್ಳುತ್ತೇವೆ, ಅಗತ್ಯ ಬಿದ್ದರೆ ನಾವೇ ಯಾರಾದರೂ ಹೋಗಿ ಬರುತ್ತೇವೆ, ನಾಳೆ ರಜೆ ಇದ್ದರೂ ಕೂಡ, ಚಿಂತೆ ಇಲ್ಲ, ಅದಕ್ಕಾಗಿ ಹಣವಿದೆ, ಆಲೋಚನೆ ನಮಗಿದೆ, ಆ ರೈತರಿಗೆ ತೊಂದರೆ ಇದ್ದರೆ ಖಂಡಿತವಾಗಿಯೂ ರೈತರ ನೆರವಿಗೆ ನಾವು ಬರುತ್ತೇವೆ ಎನ್ನತಕ್ಕ ಮಾತನ್ನು ಹೇಳಿದರು. He has made a positive statement.

ಶ್ರೀ ಎ.ಟಿ.ರಾಮಸ್ವಾಮಿ: ರೈತರ ನೆರವಿಗೆ ಹೋಗುತ್ತೇವೆಂದು ಹೇಳಿದರು. ಕಳೆದ ವರ್ಷ ಸರ್ಕಾರ 350 ರೂಪಾಯಿ ಬೆಂಬಲ ಬೆಲೆಗೆ ಕೊಂಡುಕೊಂಡತಿತ್ತು. ಸ್ಥಿರವಾದ ಬೆಲೆ ಉಳಿಯಲಿಕ್ಕೆ, ಸ್ಥಿರವಾದ ಬೆಲೆ ರೈತನಿಗೆ ದೊರೆಯಲಿಕ್ಕೆ ಅವಕಾಶವಾಯಿತು. ಈಗ ಇವರ ಸರ್ಕಾರದ ಏಜೆನ್ಸಿಗಳು ಕೊಂಡುಕೊಳ್ಳದೇ ಹೋದರೆ, ನಿಧಾನಿಸಿದರೆ, ಮತ್ತೆ ರೈತರ ಶೋಷಣೆಯಾಗುತ್ತದೆ.

MR. SPEAKER: That is what he has said- 'immediately'. ಇಮ್ಮೀಡಿಯಟ್ಲಿ ಮಾಡುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀಎ.ಟಿ.ರಾಮಸ್ವಾಮಿ: ತತ್‌ಕ್ಷಣದಲ್ಲಿ ಮಾಡಬೇಕು. ಸುಮಾರು 3 ಕೋಟಿ ರೂಪಾಯಿಯ ಆಲೂಗೆಡ್ಡೆಯನ್ನು ನಮ್ಮ ಜಿಲ್ಲೆಯಲ್ಲಿ ಬೆಳೆಯುತ್ತಾರೆ.

ಅಧ್ಯಕ್ಷರು: ನಾನು ಹೇಳುತ್ತೇನೆ ಕೇಳಿ, I must compliment the Minister for Agriculture. ಇನ್‌ಫರ್ಮೇಶನ್ ತರಿಸುತ್ತೇವೆ, ಅಗತ್ಯ ಬಿದ್ದರೆ ಸ್ವತಃ ನಾವೇ ಮಾರ್ಕೆಟ್‌ಗೆ ಹೋಗುತ್ತೇನೆಂದು ಹೇಳಿದ್ದಾರೆ. It is fair enough. ಈಗ ಪ್ರಕಟಣೆ.

(9) ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ದಿನಾಂಕ 4ನೇ ಸೆಪ್ಟೆಂಬರ್, 1997ರಂದು ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕ, 1997

2. ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕ, 1997

3. ಕರ್ನಾಟಕ ಧನ ವಿನಿಯೋಗ (ನಂ.5) ವಿಧೇಯಕ, 1997

4. ಕರ್ನಾಟಕ ಧನ ವಿನಿಯೋಗ (ನಂ.6) ವಿಧೇಯಕ, 1997

5. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 1997